ಜೊತೆಯಲ್ಲಿ ತೆರಳಲು ಸಾಧ್ಯವಾಗದಿದ್ದಾಗ ಸೂಕ್ತ ರಕ್ಷಣೆಯಲ್ಲಿ ಅವಳನ್ನು ಕಳುಹಿಸಿದ್ದನು. ಕಿರಿಯ ರಾಣಿಯು ಹಸಿರು ವನಸಿರಿ ಹೂಬಳ್ಳಿ, ಹಾರಾಡುವ ಪಕ್ಷಿಗಳು ಎಲ್ಲದರಲ್ಲೂ ಕಾವ್ಯದ ಗಂಧವನ್ನು ಆಘ್ರಾಣಿಸುತ್ತಾ ಬರುತ್ತಿದ್ದಾಗ ದಾರಿ ಮಧ್ಯೆ ವ್ಯಾಘ್ರವೊಂದು ಅಡ್ಡಬಂದು ಘರ್ಜಿಸಲು ಸಖಿಯರೆಲ್ಲರೂ ದಿಕ್ಕುಪಾಲಾದರು. ಕಿರಿಯ ರಾಣಿಯ ಮೇಲೆ ಇನ್ನೇನು ವ್ಯಾಘ್ರ ನೆಗೆಯಲಿರುವಾಗ ಅದೆಲ್ಲಿದ್ದನೋ ಮಿಂಚಿನ ವೇಗದಲ್ಲಿ ಕುದುರೆಯೇರಿ ಬಂದ ಸೇನಾಪತಿ ವ್ಯಾಘ್ರವನ್ನು ಅಡ್ಡಗಟ್ಟಿ ಖಡ್ಗದಿಂದ ಒಂದೇ ಏಟಿಗೆ ಹೊಡೆದುರುಳಿಸಿದನು. ಶೂರನೂ ಧೀರನೂ ಆದ ಸೇನಾಪತಿ ಸಾವಿನ ದವಡೆಯಿಂದ ಕಿರಿಯ ರಾಣಿಯ ಜೀವವನ್ನು ಉಳಿಸಿದಾಗ ಅವಳು ಪೂರ್ತಿಯಾಗಿ ಪರವಶವಾದಳು. ಕಿರಿಯ ರಾಣಿಗೆ ಸಾವಿನೆದುರು ಪ್ರೀತಿಯ ದರ್ಶನವಾಗಿತ್ತು! ಭಯದಿಂದ ಕಂಪಿಸುತ್ತಿದ್ದ ಅವಳು ಮೈಮರೆತು ಸೇನಾಪತಿಯನ್ನು ಅಪ್ಪಿಕೊಂಡಳು. ಆ ಸ್ಪರ್ಶವು ಅವಳ ಬಂಧನಗಳನ್ನು ಸಡಲಿಸಿ ತಡೆಹಿಡಿದ ಪ್ರೀತಿಯು ಅಭಿಷೇಕವಾಗಿ ಹರಿಯುವಂತೆ ಮಾಡಿತು. ಸೇನಾಪತಿಗೆ ಪ್ರೇಮದೆದುರು ಸಾವಿನ ದರ್ಶನವಾಗಿತ್ತು! ಬಿಡಿಸಿಕೊಂಡಷ್ಟೂ ಬಿಗಿದುಕೊಳ್ಳುವ ರಾಣಿ ತನ್ನ ಬಾಹುಗಳಲ್ಲಿ! ಅವಳ ನಶೆಯ ನೇತ್ರಗಳು ನಿನ್ನನ್ನು ಪ್ರೀತಿಸುವೆ ನಲ್ಲ ಎಂದು ಉಸುರುತ್ತಿದ್ದವು. ಸೇನಾಪತಿಯು ಅಧೀರನಾದನು. ಮಹಾರಾಜನಿಗೆ ತಿಳಿದರೆ ತನ್ನನ್ನು ವಧಾಸ್ಥಾನಕ್ಕೆ ಕಳುಹಿಸುವುದು ನಿಶ್ಚಿತ. ರಾಣಿಯ ಪ್ರೇಮವನ್ನು ತಿರಸ್ಕರಿಸಿದರೂ ಹುಸಿ ಅಪವಾದ ಹೊರಸಿ ಶಿರ ತೆಗೆಸಲೂಬಹುದು. ರಾಜನಿಷ್ಠೆ, ರಾಜದ್ರೋಹ ಮತ್ತು ರಾಣಿನಿವೇದನೆ ನಡುವೆ ಸಿಲುಕಿ ಸೇನಾಪತಿ ಹೈರಾಣಾದನು. ಘೋರ ವ್ಯಾಘ್ರವನ್ನೇ ಹೊಡೆದುರುಳಿಸಿದ ನಿರ್ಭೀತ ಸೇನಾಪತಿಯ ತುಟಿಗಳು ಭಯದಿಂದ ಅದುರುವುದನ್ನು ಕಂಡು ಕಿರಿಯ ರಾಣಿ ತನ್ನ ಅಧರಗಳಲ್ಲಿ ಆ ಕಂಪನವನ್ನು ಹೀರಿಕೊಂಡಳು. ಎಲ್ಲ ಬಂಧನಗಳು ಮುಕ್ತವಾಗುವ ಮಾಯದ ಬಂಧನದಲ್ಲಿ ಇಬ್ಬರೂ ಒಂದಾದರು. ಸೇನಾಪತಿಯ ಬಲಿಷ್ಠ ತೋಳುಗಳಲ್ಲಿ ಮಿದುಯೆದೆಯ ರಾಣಿ ತಡೆಹಿಡಿದ ತನ್ನೆಲ್ಲ ಚಾಂಚಲ್ಯ, ಬೇಚೈನೀಗಳನ್ನು ಮುಕ್ತಗೊಳಿಸಿಕೊಂಡಳು. ದಟ್ಟ ಹಸಿರು ಕಾಡಿನ ನಡುವಿನ ಏಕಾಂತದಲ್ಲಿ ಅವರ ಮೌನಮಿಲನವು ಕಾಲಾತೀತ ವ್ಯಾಮೋಹದಲ್ಲಿ ಭೋರ್ಗರೆಯುತ್ತಿತ್ತು!



ಸೇನಾಪತಿಯು ರಾಣಿಯನ್ನು ಕುದುರೆ ಮೇಲೆ ಕುಳ್ಳರಿಸಿ ಅಂಗರಕ್ಷಕನಾಗಿ ಜೊತೆಯಲ್ಲಿ ನಡೆದು ಬರುವಾಗ ಇಬ್ಬರ ಮನಸುಗಳೂ ಅರಣ್ಯ ಸಾಕ್ಷಿಯಾಗಿ ಸಹಸ್ರಪದಿ ತುಳಿದವು!

★★★

ಮಧುರಮತಿಯ ಯಾನೆ ಮಹಾರಾಜನ ಯಾನೆ ಕಿರಿಯ ರಾಣಿಯ ಸುಂದರ ಸಾಲುಗಳು ಈಗ ಸೇನಾಪತಿಯ ಭಾವಪ್ರಪಂಚವನ್ನೂ ಪ್ರವೇಶಿಸಿದವು. ಮಹಾರಾಜನು ಕಳುಹಿಸುತ್ತಿದ್ದ ಕಾವ್ಯಮುತ್ತುಗಳು ರಾಣಿಯನ್ನು ತಲುಪುವುದೇ ತಡ ತಾನು ಒಲಿದಂತೆ ಅಷ್ಟಿಷ್ಟು ಬದಲಾಯಿಸಿ ತಿದ್ದಿ ಅವನ್ನು ಸೇನಾಪತಿಗೆ ಗುಪ್ತವಾಗಿ ತಲುಪುವಂತೆ ಮಾಡಿದಳು. ಕಾವ್ಯಸಾಲುಗಳಲ್ಲಿ ತಾನೇ ತುಳುಕಾಡುತ್ತ ಸಾಗರದಂಥ ಸೇನಾಪತಿಯ ಎದೆಸೇರಿದ ಅನುಭವದಲ್ಲಿ ಮೈಮರೆತಳು. ಕಿರಿಯ ರಾಣಿ ಸಂಪೂರ್ಣವಾಗಿ ಖಿನ್ನತೆಯಿಂದ ಹೊರಬಂದು ಕ್ಷಣಕ್ಷಣವೂ ಲವಲವಿಕೆಯಲ್ಲಿ ಇರುವುದನ್ನು ಕಂಡು ಮಹಾರಾಜನು ಸಂತೃಪ್ತನಾಗುವನು. ಇದಕ್ಕೆಲ್ಲ ಕಾರಣನಾದ ಮಧುರಮತಿಯನ್ನು ಮನದಲ್ಲೇ ಕೊಂಡಾಡುವನು. ಕುಲದೇವ ವೀರಕೇಸರಿಯನ್ನು ಸ್ಮರಿಸುವನು.